ದಿಃ 12-09-2019 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ ಎಸ್ ಎಸ್ ಕೆ ವಕೀಲರಿಂದ.

ನಾನು ಈಗ ತೇಗನಳ್ಳಿ ಗ್ರಾಮದಲ್ಲಿ ಇರುತ್ತೇನೆ . ನಾನು ಯಾವ ವರ್ಷದಲ್ಲಿ ಹುಟ್ಟಿದ್ದೇನೆ ನನಗೆ ಗೊತ್ತಿಲ್ಲ . ಆದರೆ 60 ವರ್ಷದ ಹಿಂದೆ ಹುಟ್ಟಿದ್ದೇನೆ . ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿದೆ . ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ . ಜನಬಾ ಬೆಳಗಾಂವಕರ ಇವರ ಜಮೀನು ತೇಗನಳ್ಳಿ ಗ್ರಾಮದಲ್ಲಿ ಇರುವುದಿಲ್ಲ. ಪ್ರತಿವಾದಿಯರ ಆಸ್ತಿಯ ಸರ್ವೆ ನಂಬರ ಹೇಳಲು ಬರುವುದಿಲ್ಲ . ಗುಂಡು ಬಾಳು ಬೆಳಗಾಂವಕರ ಇವರ ಪರಿಚಯವಿದೆ . ಅವರು ನನಗೆ ಹುಟ್ಟಿದಾಗಿನಿಂದ ಪರಿಚಯವಿದೆ . ಅವರು ಯಾವಾಗ ತೀರಿಕೊಂಡಿದ್ದಾರೆ ಗೊತ್ತಿಲ್ಲ. ನಾನು 15 ವರ್ಷದವನಿದ್ದಾಗ ಅವರು ತೀರಿಕೊಂಡಿದ್ದಾರೆ. ಅವರಿಗೆ ಆರು ಜನ ವಾರಸದಾರರು ಇದ್ದರು ಎಂದರೆ ನನಗೆ ಗೊತ್ತಿಲ್ಲ . ಅದರಲ್ಲಿ ಜನಬಾ ಬೆಳಗಾಂವಕರ ಇವರು ಹಿರಿಯರು ಎಂದರೆ ನನಗೆ ಗೊತ್ತಿಲ್ಲ . ಮೃತ ಒಂದನೆ ಪ್ರತಿವಾದಿ ಮತ್ತು ಪ್ರತಿವಾದಿ ನಂಬರ 1 ಬ ಇವರು ಮೂಲತಃ ತೇಗನಳ್ಳಿ ಗ್ರಾಮದವರು ಅಲ್ಲಾ ಎಂದರೆ ಸರಿ . ಅವರು ಬೆಳಗಾವಿಯ ಕಾಕತಿಯವರು ಎಂದರೆ ನನಗೆ ಗೊತ್ತಿಲ್ಲ . ಮೃತ ಪ್ರತಿವಾದಿಯರ ಅಡ್ಡ ಹೆಸರು ಬೆಳಗಾಂವಕರ ಅಂತಾ ಇತ್ತು ಅಂದರೆ ಸರಿ . ಆದ್ದರಿಂದ ಅವರ ಹಿರಿಯ ಮಗ ಜನಬಾ ಇವರು ಅಡ್ಡ ಹೆಸರನ್ನು ಬೆಳಗಾಂವಕರ ಅಂತಾ ಮುಂದುವರೆಸಿಕೊಂಡು ಬಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಜನಬಾ ಇವರು ಕುಟುಂಬದ ಪರಿಚಯ ಇದೆ ಎಂದರೆ ಸರಿಯಲ್ಲ . ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಕೋಕಿತಕರ ಅಂತಾ ಅಡ್ಡ ಹೆಸರು ಬದಲಾವಣೆ ಯಾವಾಗ ಆಗಿದೆ ನನಗೆ ಗೊತ್ತಿಲ್ಲ . ಜನಬಾ ಇವರ ವಾರಸದಾರರಿಗೆ ಆಸ್ಥಿಯಲ್ಲಿ ಪಾಲು ಹೋಗುತ್ತದೆ ಅಂತಾ ಮಧ್ಯದಲ್ಲಿ ಪ್ರತಿವಾದಿಯರು ತಮ್ಮ ಅಡ್ಡ ಹೆಸರನ್ನು ಕೋಕಿತಕರ ಅಂತಾ ಬದಲಾಯಿಸಿ ಕೊಂಡಿದ್ದಾರೆ ಎಂದರೆ ಸರಿಯಲ್ಲ.

ಪ್ರತಿವಾದಿಯರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಗುಂಡು ಬಾಳು ಬೆಳಗಾಂವಕರ ಇವರ ಹಿರಿಯ ಮಗ ಜನಬಾ ಬೆಳಗಾಂವಕರ ಇದ್ದರೂ ಸಹ ಅವರಿಗೆ ಆಸ್ಥಿ

ಹೋಗುತ್ತದೆಂದು ಮತ್ತು ಪ್ರತಿವಾದಿರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

<u>ಮರುವಿಚಾರಣೆಃ</u> -ಇಲ್ಲ-.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.